**1 ನೇ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ**

ಸಿ.ಸಿ. ನಂ.1463/2024

| | |
|---|---|
| ಸಾಕ್ಷಿದಾರರ ಹೆಸರು | : ಮೋಹನ |
| ತಂದೆಯ/ಗಂಡನ ಹೆಸರು | : ತಿಮ್ಮಪ್ಪ |
| ವಯಸ್ಸು | : 36 ವರ್ಷ |
| ಉದ್ಯೋಗ | : ಕೂಲಿ ಕೆಲಸ |
| ವಾಸಃ | : ಗಾಂಧಿನಗರ |

ಸಿ ಡಬ್ಲ್ಯೂ– 2 ಪಿ.ಡಬ್ಲ್ಯೂ– 2

**ದಿನಾಂಕ 16.07.2026. ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ:– ಸ.ಸ. ಅ ರವರಿಂದಃ**

ಚಾಸಾ–1 ನನ್ನ ಅಕ್ಕ. 5 ವರ್ಷದ ಹಿಂದೆ ಮದ್ಯಾಹ್ನ 2 ಗಂಟೆಗೆ ನನಗೆ ಚಾಸಾ–1 ರವರು ಕುಡಿದು ಬರುತ್ತೀಯಾ, ಎನನ್ನು ತಿನ್ನುತ್ತಿಯಾ ಎಂದು ಒಳಗೆ ಜೊರು ಮಾಡುತ್ತಾ ದೇವಸ್ಥಾನದ ಹತ್ತಿರ ಪಾದ ತೊಳೆಯಲು ಬಂದರು. ನಾನು ಮನೆ ಒಳಗೆ ಮಲಗಿದ್ದೆ ಆಗ ಚಾಸಾ–1 ರವರ ಕುಗಿದ ಶಬ್ದ ಕೇಳಿತ್ತು. ಆರೋಪಿ ಚಾಸಾ–1 ರವರಿಗೆ ಕೆನ್ನೆಗೆ, ಬೆನ್ನಿಗೆ, ಎದೆಗೆ ಮುದ್ದೆಮಾಲು 1 ನಿಂದ ಹೊಡೆಯುತ್ತಿದ್ದ, ಯಾಕೆ ನನ್ನ ಅಕ್ಕನನ್ನು ಹೊಡೆಯುತ್ತಿದ್ದಿಯಾ ಎಂದು ಕೇಳಿದಾಗ ಕಬ್ಬಿಣದ ರಾಡ್ ನಿಂದ ನನ್ನ ಬೆನ್ನಿಗೆ, ಎದೆಗೆ, ಕಾಲಿಗೆ ಹೊಡೆದಿರುತ್ತಾರೆ, ಅಷ್ಟರಲ್ಲಿ ಚಾಸಾ–1 ರವರಿಗೆ ಪ್ರಜ್ಞೆ ತಪ್ಪಿರುತ್ತದೆ. ಚಾಸಾ–3 ಮತ್ತು 4 ರವರು ಬಂದು ಜಗಳ ಬಿಡಿಸಿ ಅಂಬುಲನ್ಸ ಕರೆಸಿ ನನ್ನನ್ನು ಮತ್ತು ಚಾಸಾ–1 ರವರನ್ನು ಆಸ್ಪತ್ರಗೆ ಕಳುಹಿಸಿರುತ್ತಾರೆ. ನ್ಯಾಯಾಲಯದ ಮುಂದೆ ಇರುವಂತಹ ಮುದ್ದೆಮಾಲು 1 ಅನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಇಂದು ಗೈರು ಹಾಜರಾಗಿರುವ ಆರೋಪಿಯನ್ನು ನೋಡಿದರೆ ಗುರುತಿಸುತೆನೆ.

(ಸಾಕ್ಷಿಯನ್ನು ಸರ್ಕಾರಿ ವಕೀಲರು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

**ಪಾಟೀ ಸವಾಲು ಸ.ಸ.ಅ ರವರಿಂದಃ**

ದಿನಾಂಕಃ 16.10.2020 ರಂದು ಮದ್ಯಾಹ್ನ 2.45 ಗಂಟೆ ಸಮಯದಲ್ಲಿ ನಾನು ಮೇಲ್ವಿಚಾರಣೆಯಿಲ್ಲಿ ಹೇಳಿದ ಘಟನೆ ನಡಯಿತು ಎಂದರೆ ಸರಿ. ಚಾಸಾ–1 ರವರಿಗೆ ನನ್ನ ತಾಯಿಯನ್ನು ಹಡ, ಸೂಳೆ ಎಂದು ಬೈದಿರುತ್ತಾರೆ, ನನಗೂ ಸೂಳೆ ಮಗ ಎಂದು ಬೈದಿರುತ್ತಾರೆ.

**ಪಾಟೀ ಸವಾಲಿಗೆ ಸಮಯ ಕೋರಿದ್ದು . ಸಮಯ ನೀಡಲಾಯಿತು.**

(ತೆರೆದ ನ್ಯಾದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

1 ನೇ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.

**1 ನೇ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ**

ಸಿ.ಸಿ. ನಂ.1463/2024

| | |
|---|---|
| ಸಾಕ್ಷಿದಾರರ ಹೆಸರು | : ತಾರಾ |
| ತಂದೆಯ/ಗಂಡನ ಹೆಸರು | : ವಿನಾಯಕ |
| ವಯಸ್ಸು | : 40 ವರ್ಷ |
| ಉದ್ಯೋಗ | : ಕೂಲಿ ಕೆಲಸ |
| ವಾಸಃ | : ಗಾಂಧಿನಗರ |

ಸಿ ಡಬ್ಲ್ಯೂ– 1 ಪಿ.ಡಬ್ಲ್ಯೂ– 1

**ದಿನಾಂಕ 16.07.2026. ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ:– ಸ.ಸ. ಅ ರವರಿಂದಃ**

ಚಾಸಾ–2 ನನ್ನ ತಮ್ಮ. 5 ವರ್ಷದ ಹಿಂದೆ ಮದ್ಯಾಹ್ನ 2 ಗಂಟೆಗೆ ಚಾಸಾ–2 ರವರಿಗೆ ಅಮ್ಮನಿಗೂ ಕ್ಯಾನ್ಸರ ಆಗಿದೆ ನೀನು ಜಾಂಡಿಸ್ ಆಗಿ ಈಗ ಚೇತರಿಕೊಳ್ಳುತ್ತಿದ್ದಿಯಾ ಮತ್ತೆ ಕುಡಿದು ಬಂದಿದ್ದಿಯಾ ಎಂದು ಮನೆ ಒಳಗೆ ಜೊರು ಮಾಡುತ್ತಲೆ ಹೊರಗೆ ಬಂದೆ, ಆ ಸಂದರ್ಭದಲ್ಲಿ ಆರೋಪಿ ಬಂದಿದ್ದು ನನಗೆ ಗೂತ್ತಾಗಲಿಲ್ಲ. ಎನೇ ಸೂಳೆ ಮುಂಡೆ ಯಾಕೆ ಬೈಯುತ್ತಿದ್ದಿಯಾ ಎಂದು ಆರೋಪಿ ಕೇಳಿದ. ಅದಕ್ಕೆ ನಾನು ನಿನಗೆ ಹೇಳಲಿಲ್ಲ ನನ್ನ ತಮ್ಮನಿಗೆ ಹೇಳಿದೆ ಎಂದು ಹೇಳಿದೆ. ಕೈಯಿಂದ ನನ್ನ ಕೆನ್ನೆಗೆ ಹೊಡೆದ, ಅವನ ಬೂಟ ಕಾಲಿನಲ್ಲಿ ನನ್ನ ಹೊಟ್ಟೆಗೆ, ನನ್ನ ಎದೆಗೆ ಒದ್ದಿರುತ್ತಾನೆ. ಮನೆಗೆ ಹೋಗಿ ಕಬ್ಬಿಣದ ರಾಡ್ ತೆಗೆದುಕೊಂಡು ಬಂದು ಕಬ್ಬಿಣದ ರಾಡಿನಿಂದ ನನ್ನ ಬೆನ್ನಿಗೆ ಹೊಡೆದ, ಆಗ ಚಾಸಾ–2 ಬಂದಿರುತ್ತಾರೆ. ಯಾಕೆ ನನ್ನ ಅಕ್ಕನನ್ನು ಹೊಡೆಯುತ್ತಿದ್ದಿಯಾ ಎಂದು ಕೇಳಿದಾಗ ಕಬ್ಬಿಣದ ರಾಡ್ ನಿಂದ ಅವನಿಗೆ ಬೆನ್ನಿಗೆ ಹೊಡೆದಿರುತ್ತಾರೆ, ಬೇರೆ ಎಲ್ಲಿ ಹೊಡೆದರು ಎಂದು ನನಗೆ ಗೊತ್ತಿಲ್ಲ ಅಷ್ಟರಲ್ಲಿ ನನಗೆ ಪ್ರಜ್ಞೆ ತಪ್ಪಿರುತ್ತದ. ಚಾಸಾ–3 ಮತ್ತು 4 ರವರು ಅಂಬುಲನ್ಸ ಕರೆಸಿ

ನನ್ನನ್ನು ಆಸ್ಪತ್ರಗೆ ಕಳುಹಿಸಿರುತ್ತಾರೆ.

ಆಸ್ಪತ್ರಗೆ ಪೊಲೀಸರು ಬಂದು ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಮಾರನೆ ದಿನ ನಾನು ಆಸ್ಪತ್ರಯಿಂದ ಬಿಡುಗಡೆ ಆಗಿ ಬಂದಾಗ ಮಧ್ಯಾಹ್ನ ಅಂದಾಜು 11.30 ಸುಮಾರಿಗೆ ಮಹಜರನ್ನು ಪೊಲೀಸರು ಮಾಡಿರುತ್ತಾರೆ. ಚಾಸಾ–3 ಮತ್ತು 4 ರವರ ಸಮಕ್ಷಮ ಮಹಜರ ಮಾಡಿರುತ್ತಾರೆ. ನಾನೇ ಘಟನಾ ಸ್ಥಳವನ್ನು ತೋರಿಸಿರುತ್ತೇನೆ. ಮಹಜರ ಸಮಯದಲ್ಲಿ ಕಬ್ಬಿಣದ ದೊಣ್ಣೆಯನ್ನು ವಶಪಡಿಸಿಕೊಂಡಿರುತ್ತಾರೆ.

ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ ಮೇರೆಗೆ ಸದರಿ ದೂರನ್ನು ನಿಪಿ–1 ಎಂದು, ಸಾಕ್ಷಿಯ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿ ಅದು ಅಮಾನತ್ತು ಪಂಚನಾಮೆಯನ್ನು ನಿಪಿ–2 ಎಂದು, ಸಾಕ್ಷಿ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಒಂದು ಪೋಟವನ್ನು ತೋರಿಸಲಾಗಿ ಅದು ಮಹಜರ ಸಮಯದಲ್ಲಿ ತೆಗೆದು ಪೋಟೋ ಎಂದು ಗುರುತಿಸಿದ ಮೇರೆಗ ಅದನ್ನು ನಿಪಿ–3 ಎಂದು, 65 ಬಿ ನಿಪಿ–4 ಎಂದು, ನ್ಯಾಯಾಲಯದ ಮುಂದೆ ಇರುವ ಕಬ್ಬಿಣದ ರಾಡನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅದನ್ನು ಮುದ್ದೆಮಾಲು 1 ಎಂದು ಗುರುತಿಸಲಾಯಿತು.

(ಸಾಕ್ಷಿಯನ್ನು ಸರ್ಕಾರಿ ವಕೀಲರು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

**ಪಾಟೀ ಸವಾಲು ಸ.ಸ.ಅ ರವರಿಂದಃ**

ದಿನಾಂಕಃ 16.10.2020 ರಂದು ಮಧ್ಯಾಹ್ನ 2.45 ಗಂಟೆ ಸಮಯದಲ್ಲಿ ನಾನು ಮೇಲ್ವಿಚಾರಣೆಯಿಲ್ಲಿ ಹೇಳಿದ ಘಟನೆ ನಡಯಿತು ಎಂದರೆ ಸರಿ. ಚಾಸಾ–2 ರವರ

ಎಡಭಾಗದ ತೊಡೆ, ಸೊಂಟ, ಎಡಕೈ ಗೆ ಮುದ್ದೆಮಾಲು 1 ರಿಂದ ಹೊಡೆದಿರುತ್ತಾರೆ ಎಂದರೆ ಸರಿ. ಕಾಲಿನಿಂದ ಆತನನ್ನು ತುಳಿದಿರುತ್ತಾರೆ ಎಂದರೆ ಸರಿ. ಇಂದು ಗೈರು ಹಾಜರಾಗಿರುವ ಆರೋಪಿಯನ್ನು ನೋಡಿದರೆ ಗುರುತಿಸುತೆನೆ.

**ಪಾಟೀ ಸವಾಲಿಗೆ ಸಮಯ ಕೋರಿದ್ದು . ಸಮಯ ನೀಡಲಾಯಿತು.**

(ತೆರೆದ ನ್ಯಾದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

1 ನೇ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.